ಓ.ಎಸ್. ನಂಬರ 40/2018

ಪಿ.ಡಬ್ಲ್ಯೂ-1

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 08-11-2024.

**ಪಾಟೀ ಸವಾಲುಃ 7 ಮತ್ತು 8 ನೇ ಪ್ರತಿವಾದಿಯರ ಪರ ಶ್ರೀ ಬಿ ಎಫ್ ಪಿ., ವಕೀಲರಿಂದಃ**

ದಾವಾಸ್ತಿ ಯಾವುದೆಂದು ಹೇಳಬಹುದೆ ಎಂದರೆ ಸರ್ವೇ ನಂ. 72 ಯರೆಬೈಲು ಗ್ರಾಮ ಎಂದು ನುಡಿಯುತ್ತಾರೆ. ದಾವಾಸ್ತಿಯ ಕ್ಷೇತ್ರ ಹೇಳಬಹುದೆ ಎಂದರೆ 13 ಎಕರೆ 20 ಗುಂಟೆ ಇದ್ದು, ಅದರಲ್ಲಿ 1 ಗುಂಟೆ ಖರಾಬು ಕ್ಷೇತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೇ ನಂ. 72 ಈಗ ಅಸ್ಥಿತ್ವದಲ್ಲಿ ಇದೆಯೇ ಎಂದರೆ ಇದೆ ಎಂದು ನುಡಿಯುತ್ತಾರೆ. ದಾವಾಸ್ತಿ 13 ಎಕರೆ 20 ಗುಂಟೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ದಾವೆ ಮಾಡುವ ಕಾಲಕ್ಕೆ ಅಥವಾ ಈ ದಿನದವರೆಗೆ ಸರ್ವೇ ನಂ. 72 ಅಸ್ತಿತ್ವದಲ್ಲಿ ಇರುವುದೇ ಇಲ್ಲ, ಅದು ಸರ್ವೇ ನಂ 72/1, 72/2 ಮತ್ತು 72/3 ಎಂದು ಪೋಡಿ ಆಗಿರುತ್ತದೆ ಎಂದರೆ ಯಾವುದೇ ಕಾಲಕ್ಕೆ ಸರ್ವೇ ನಂ. 72 ಹಿಸ್ಸೇ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ2 ರ ಪ್ರಕಾರ ದಾವೆ ಮಾಡುವ ಕಾಲಕ್ಕೆ ಸರ್ವೇ ನಂ. 72/3 ಕ್ಷೇತ್ರ 4 ಎಕರೆ 19 ಗುಂಟೆ 10 ಆಣೆ ಎಂದು ಇತ್ತು, ಸರ್ವೇ ನಂ. 72 ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಪ್ರತಿವಾದಿಯರೇ ಹಿಸ್ಸೆಗಳನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೇ ನಂ. 72/2 ಕ್ಷೇತ್ರ 4 ಎಕರೆ 19 ಗುಂಟೆ 10 ಆಣೆ ಬೈಲುಗೌರಿ ಎಂಬುವವರ ಹೆಸರಿನಲ್ಲಿ ಇದೆ ಎಂದು ದಾಖಲೆ ತೋರಿಸುತ್ತಿದೆ ಎಂದರೆ ದಾಖಲೆಯಲ್ಲಿ ಇದೆ ಎಂದು ನುಡಿಯುತ್ತಾರೆ. ಸರ್ವೇ ನಂ. 72/1 ಕ್ಷೇತ್ರ 4 ಎಕರೆ 19 ಗುಂಟೆ 12 ಆಣೆಗೆ ಸಹ ಕಂದಾಯ ದಾಖಲಾತಿಗಳಲ್ಲಿ ದಾಖಲೆ ಇರುವುದಾಗಿ ನುಡಿಯುತ್ತಾರೆ. ದಾವೆ ದಾಖಲು ಮಾಡುವ ಕಾಲಕ್ಕೆ ವಾದಿಯರು ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನೋಡಿದ್ದೀರಿಯೇ ಎಂದರೆ ನೋಡಿದ್ದೇನೆ ಎಂದು ನುಡಿಯುತ್ತಾರೆ. ಸರ್ವೇ ನಂ. 72/1 ಎಷ್ಟು ಕ್ಷೇತ್ರ ಇದೆ ಎಂದು ವಾದ ಪತ್ರದಲ್ಲಿ ಕಾಣಿಸಿರುತ್ತೇನೆ ಎಂದರೆ 4 ಎಕರೆ 19 ಗುಂಟೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸರ್ವೇ ನಂ. 72/1, 4 ಎಕರೆ 19 ಗುಂಟೆ 2 ಆಣೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ಆದರೆ ನಾನು ಹಾಜರುಪಡಿಸಿದ ಪಹಣಿ ಪತ್ರಿಕೆಯಲ್ಲಿ ಸರ್ವೇ ನಂ. 72/1 ರ ಕ್ಷೇತ್ರ 4 ಎಕರೆ 19 ಗುಂಟೆ 12 ಆಣೆ ಎಂದು ತೋರಿಸಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ 7 ಮತ್ತು 8 ನೇ ಪ್ರತಿವಾದಿಯರ ಪರ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

-Sd-

ಸಿವಿಲ್ ಜಡ್ಜ , ಮುಂಡಗೋಡ.